


'ಟಾಕೀಸಿನ ಹಿಂದೆ ಮಾಲಿಕನ ಮನೆ... ಇವನು ಸದಾ ಅಲ್ಲೇ ಬಿದ್ದಿರುವ... ನಿತ್ಯ ಮಾತು ಭೇಟಿ. ಗುಸುಗುಸು ಪಿಸಪಿಸ. ಮತ್ತೆ ಏನಾಗುತ್ತೆ... ಪರದೆ ಮೇಲೆ ಸಿನಿಮಾ... ಪರದೆ ಹಿಂದೆ ನಾಟಕ... ಟಾಕೀಸ್ ಮಾಲಿಕನ ಗಮನಕ್ಕೂ ಬಂತು... ಅವನು ಬಿಗಿ ಮಾಡಿದ... ಇಬ್ರೂ ವಿಷ ಕುಡುದ್ರು... ಸಿನಿಮಾ ಕ್ಲೋಸ್.'

ರುಜಾರಿ ಗಂಟೆ ಗೋಪುರದ ಕೆಳಗೆ ನಿಂತು ಕಣ್ಣು ಮಿಟುಕಿಸಿ ಮತ್ತೂ ನುಡಿದ, 'ನೀನೇ ಅಲ್ವಾ, ಆ ಹುಡುಗನ್ನ ಅಲ್ಲಿ ಕೆಲಸಕ್ಕೆ ಸೇರಿಸಿದ್ದು...'

ಗಂಟೆ ನಾಲಿಗೆ–ತಲೆಯ ಮೇಲೆ ಬಿದ್ದಂತೆ ಆಯಿತು. ಈತ ಹುಂ ಎಂದು ತಲೆಯಾಡಿಸಿ ಇಗರ್ಜಿ ಒಳ ಹೊಕ್ಕ. ಪಾದರಿಗಳು ಪೂಜೆಗೆಂದು ಪೀಠ ಏರಿದ್ದರು. ಪೂಜೆಯ ಉದ್ದಕ್ಕೂ ಈತ ರುಜಾರಿ ಹೇಳಿದ ಮಾತಿಗೆ ಮಿಡುಕಾಡುತ್ತಲೇ ಇದ್ದ.

ಆ ಹುಡುಗನ್ನ ಕೆಲಸಕ್ಕೆ ಸೇರಿಸಿದ್ದು ತಾನು, ಹೌದು. ಆದರೆ ಟಾಕೀಸ್ ಮಾಲಿಕನ ಮಗಳನ್ನ ಪ್ರೀತಿಸು ಅಂತ ಹೇಳಿದವನು ತಾನೇ? ಇವನಿಗೆ ಗಂಟು ಬೀಳು ಎಂದು ಆ ಹುಡುಗಿಗೆ ಹೇಳಿದವನು ತಾನೇ? ಇವರಿಬ್ಬರ ಜಾತಿ ಬೇರೆ ಬೇರೆ, ಇವರ ಮದುವೆಗೆ ಅನುಮತಿ ಕೊಡದೆ ಅಡ್ಡಿ ಮಾಡು ಎಂದು ಟಾಕೀಸ್ ಮಾಲಿಕನಿಗೆ ಹೇಳಿದವನು ತಾನೇ?. ಪೂಜೆಯುದ್ದಕ್ಕೂ ಇವನು ಯೋಚಿಸಿದ. ಕೊನೆಗೆ ಪೂಜೆ ಮುಗಿದ ಮೇಲೆ ಶವದ ಹಿಂದೆಯೇ ಸಿಮಿತ್ರಿಯವರೆಗೆ ಹೋಗಿ ಶವವನ್ನ ಮಣ್ಣು ಮಾಡಿದ ಮೇಲೆ ಒಂದು ಹಿಡಿ ಮಣ್ಣು ಹಾಕಿ ಗಾಬ್ರಿಯೆಲ್ಲನ ಕೈ ಹಿಡಿದು ಅವನಿಗೆ ಸಾಂತ್ವನ ಹೇಳಿದ.

ಅತ್ತು ಅತ್ತು ಹಣ್ಣಾಗಿದ್ದ ಗಾಬ್ರಿಯೆಲ್ಲ, 'ನಮ್ಮ ಮನೆಗೆ ಒಂದು ಆಧಾರ ಆಗಿದ್ದ ಮಗ... ಹೊರಟುಹೋದ... ಅವನನ್ನ ನೀನು ಹೇಳಿ ಈ ಕೆಲಸಕ್ಕೆ ಕಳಿಸಬಾರದಿತ್ತು ಅಂತ ಈಗ ನನಗೆ ಅನ್ನಿಸುತ್ತಿದೆ' ಎಂದು ಬಿಕ್ಕಿದ. ಇವನಿಗೆ ಏನು ಮಾತನಾಡಬೇಕು ಎಂಬುದು ತೋಚದೆ ಅವನ ಕೈ ಹಿಡಿದು ಹಿಸುಕಿ ಮನೆಯತ್ತ ತಿರುಗಿದ. ರುಜಾರಿಯ ಮಾತಿನ ಜೊತೆ ಈ ಮಾತೂ ಸೇರಿಕೊಂಡಿತು.

ಮನೆಗೆ ಬಂದಾಗ ಮಗ ವೆರಾಂಡದಲ್ಲಿ ಕುಳಿತಿದ್ದವ, 'ಆಯ್ತು ಎಲ್ಲ?' ಎಂದು ಕೇಳಿದ.

'ಹೋಗಬೇಕಲ್ಲ... ಸತ್ತವರಿಗೆ ಮಣ್ಣಿಗೆ ತಲುಪಿಸಬೇಕಾದ್ದು ನಮ್ಮ ಧರ್ಮ ಅಲ್ವಾ?' ಎಂದು ಕೇಳಿದ.

'ಹೌದು, ಎಲ್ಲೋ ಒಂದು ಕಡೆ ಕೆಲಸ ಮಾಡತಿದ್ದ ಹುಡುಗನ್ನ ಒಯ್ದು ಅಲ್ಲಿ ಸೇರಿಸಿ ಈಗ ಧರ್ಮ–ಕರ್ಮ ಅನ್ನೋದು...'

ಮಗ ಮುಖದ ಮೇಲೆ ಹೊಡೆದಂತೆ ನುಡಿದ.

ಇವನು ಕೈಕಾಲು ಮುಖ ತೊಳೆದು ಒಳಬಂದು ದೇವರ ಅಲ್ತಾರಿನ ಮುಂದೆ ಹೋಗಿ ಮೊಣಕಾಲೂರಿದ. ■